## ಚರ್ಚೆಗೆ ಸಂಬಂಧಿಸಿದ ಪೂರಕ ಪ್ರಶ್ನೆಗಳು

1. ವಾತಾವರಣದಲ್ಲಿ ಆಗುವ ದೈನಂದಿನ ಬದಲಾಣೆಗಳು ಯಾವುವು?
2. ಬೆಳಗ್ಗೆ ಮತ್ತು ಸಂಜೆ ಸೂರ್ಯನ ತಾಪ ಹೇಗಿರುತ್ತದೆ?
3. ದಿನದಲ್ಲಿ ಯಾವಾಗ ಹೆಚ್ಚು ಬಿಸಿಲಿರುವುದು?
4. ಬಿಸಿಲಿನಿಂದ ರಕ್ಷಣೆ ಪಡೆಯಲು ಏನನ್ನು ಆಶ್ರಯಿಸುತ್ತೇವೆ?
5. ಬಿಸಿಲಿನಿಂದ ಆಗುವ ಉಪಯೋಗಗಳೇನು?
6. ಒಮ್ಮೊಮ್ಮೆ ಹಗಲು ಹೊತ್ತು ಆಕಾಶದಲ್ಲಿ ಸೂರ್ಯ ಕಾಣುವುದಿಲ್ಲ, ಏಕೆ?
7. ನಾವು ಛತ್ರಿಯನ್ನು ಯಾವಾಗ ಬಳಸುತ್ತೇವೆ?
8. ಮಳೆಯಿಂದ ರಕ್ಷಣೆ ಪಡೆಯಲು ಯಾವ ವಸ್ತುಗಳನ್ನು ಬಳಸುತ್ತೇವೆ?
9. ಆಕಾಶದಲ್ಲಿ ಕಾಮನಬಿಲ್ಲು ಯಾವಾಗ ಕಾಣುತ್ತದೆ?
10. ಮಳೆಯಿಂದ ನಮಗೇನು ಉಪಯೋಗವಾಗುತ್ತದೆ?
11. ಹವಾಮಾನ ನಕ್ಷೆಯನ್ನು ಯಾವಾಗ ಮತ್ತು ಹೇಗೆ ಗುರುತಿಸುತ್ತೇವೆ?
12. ಹವಾಮಾನ ಎಂದರೇನು?

### ನಿಮಗಿದು ಗೊತ್ತೆ ?

* ಕರ್ನಾಟಕದಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಚಿಕ್ಕಮಗಳೂರು ಜಿಲ್ಲೆಯ ಆಗುಂಬೆ.
* ಸೂರ್ಯನ ಶಾಖದಿಂದ ಭೂಮಿಯ ಮೇಲಿನ ನೀರು ಕಾದು ಆವಿಯಾಗಿ, ಮೇಲೇರಿ ಮೋಡವಾಗಿ ಮಳೆಯಾಗುತ್ತದೆ. ಇದನ್ನೇ 'ಜಲಚಕ್ರ' ಎನ್ನುತ್ತೇವೆ.
* ಕಾಮನ ಬಿಲ್ಲು ಯಾವಾಗಲೂ ಪೂರ್ವ ಅಥವಾ ಪಶ್ಚಿಮ ದಿಕ್ಕುಗಳಲ್ಲಿ ಮಾತ್ರ ಕಾಣುವುದು.

13



# ಚರ್ಚಾ ಚಿತ್ರಗಳು

# ನಮ್ಮ ಜಿಲ್ಲೆ

189

**ಸಾಮರ್ಥ್ಯ** : ಜಿಲ್ಲೆಯ ಪರಿಚಯ ಮಾಡಿಕೊಳ್ಳುವರು.

**ಸೂಚನೆ :**

* ಶಿಕ್ಷಕರು ತಮ್ಮ ಜಿಲ್ಲೆಯ ಭೌಗೋಳಿಕ ಹಾಗೂ ರಾಜಕೀಯ ಭೂಪಟ ತೋರಿಸುತ್ತಾ ವಿವರಿಸಬೇಕು.
* ಶಿಕ್ಷಕರು ತಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಖನಿಜಗಳು, ಬೆಳೆಗಳು, ಸಂಪನ್ಮೂಲಗಳು, ಕರಕುಶಲ ವಸ್ತುಗಳು, ಪ್ರಸಿದ್ಧ ಸ್ಥಳಗಳು ಹಾಗೂ ಪ್ರಸಿದ್ಧ ವ್ಯಕ್ತಿಗಳನ್ನು ಪರಿಚಯಿಸುವುದು.
* ನಿಮ್ಮ ನೆರೆಹೊರೆಯ ಜಿಲ್ಲೆಗಳ ಮಾಹಿತಿಯ ವಿಶೇಷ ಕೈಪಿಡಿಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಪ್ರಗತಿ ನೋಟದಲ್ಲಿ ಇದಕ್ಕೆ ಕರ್ನಾಟಕ ನಕ್ಷೆಯ ಚಿಹ್ನೆ ನೀಡಿದ್ದು ಮೆಟ್ಟಿಲು ಸಂಖ್ಯೆಯನ್ನು ನಿಗಧಿಗೊಳಿಸಿರುವುದಿಲ್ಲ. ಪ್ರಗತಿ ನೋಟದಲ್ಲಿ 7 ಬಾಕ್ಸ್‌ಗಳನ್ನು ಈ ಚಿಹ್ನೆಗೆ ನೀಡಿದ್ದು ನಿಮ್ಮ ಜಿಲ್ಲೆಗೆ ಸಂಬಂಧಿಸಿದ ನೆರೆಹೊರೆ ಜಿಲ್ಲೆಯ ಸಂಖ್ಯೆಗಳಿಗನುಗುಣವಾಗಿ ಇವುಗಳನ್ನು ಬಳಸುವುದು.

## ಕರ್ನಾಟಕ ನಕ್ಷೆ



13

# ಕಲಿಕಾಂಶ

189

ನಿನಗೆ ಹಳ್ಳಿಗಳ ಬಗ್ಗೆ ಪರಿಚಯವಿರಬಹುದು ಅಥವಾ ನೀನು ಹಳ್ಳಿಯಲ್ಲಿ ವಾಸವಾಗಿರಬಹುದು. ಇಲ್ಲವೇ ನೋಡಿರಬಹುದು. ಇಂತಹ ಹಳ್ಳಿಗಳಲ್ಲಿ ಹಲವು ಮನೆಗಳಿವೆ. ಈ ಮನೆಗಳ ಸಮೂಹ ಸೇರಿ ಗ್ರಾಮವಾಗಿವೆ. ಹಲವು ಗ್ರಾಮಗಳು ಸೇರಿ ಹೋಬಳಿಗಳು ರಚಿಸಲಾಗಿದೆ. ಹಲವು ಹೋಬಳಿಗಳ ಸಮೂಹವೇ ತಾಲ್ಲೂಕು. ತಾಲ್ಲೂಕುಗಳ ಸಮೂಹಕ್ಕೆ 'ಜಿಲ್ಲೆ' ಎನ್ನುವರು. ಹೀಗೆ ಹಲವು ಜಿಲ್ಲೆಗಳು ಸೇರಿ ಒಂದು ರಾಜ್ಯವಾಗುತ್ತದೆ. ನಮ್ಮ ರಾಜ್ಯ ಕರ್ನಾಟಕ. ಈ ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಿವೆ.

ಪ್ರತಿಯೊಂದು ಜಿಲ್ಲೆಗೂ ಅದರದೇ ಆದ ಮೇಲ್ಮೈ ಲಕ್ಷಣ ಮತ್ತು ಸಾಂಸ್ಕೃತಿಕ ಹಿನ್ನೆಲೆ ಇದೆ. ಪ್ರತಿ ಜಿಲ್ಲೆಯೂ ಪ್ರಸಿದ್ಧ ಸ್ಥಳಗಳು ವ್ಯಕ್ತಿಗಳು ವಿಶೇಷ ಸಸ್ಯಗಳು ಮತ್ತು ಪ್ರಾಣಿಗಳನ್ನು ಒಳಗೊಂಡಿರುತ್ತವೆ. ಜಿಲ್ಲೆಯ ಮಣ್ಣು ಹಾಗೂ ಹವಾಮಾನಕ್ಕೆ ತಕ್ಕ ಬೆಳೆಗಳನ್ನು ಬೆಳೆಯುವರು. ಪ್ರತಿ ಜಿಲ್ಲೆಯಲ್ಲಿನ ಕಾಡುಗಳು ಮತ್ತು ಅಲ್ಲಿ ದೊರೆಯುವ ಖನಿಜ ಸಂಪನ್ಮೂಲಗಳಿಂದ ವಿವಿಧ ಕೈಗಾರಿಕೆಗಳು ಬೆಳೆದು ಬಂದಿವೆ. ಇವುಗಳಿಂದ ಜನ ಜೀವನಕ್ಕೆ ತಕ್ಕಂತೆ ಕೆಲವು ಕರಕುಶಲ ಕಲೆಗಳು ಬೆಳೆದು ಬಂದಿವೆ. ಉದಾ : ಕಲೆ, ಕುಸುರಿ, ಕೆತ್ತನೆ ಇತ್ಯಾದಿ.

## ಚರ್ಚೆಗೆ ಸಂಬಂಧಿಸಿದ ಪೂರಕ ಪ್ರಶ್ನೆಗಳು

1. ನಿನ್ನ ತಾಲ್ಲೂಕು ಯಾವುದು?
2. ಜಿಲ್ಲೆಯ ಹೆಸರೇನು?
3. ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ?
4. ಜಿಲ್ಲೆಯಲ್ಲಿ ಯಾವ ನದಿಗಳು ಹರಿಯುತ್ತವೆ?
5. ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳು ಯಾವುವು?
6. ಜಿಲ್ಲೆಯ ನೆರೆಹೊರೆಯ ಜಿಲ್ಲೆಗಳನ್ನು ಹೇಳು?
7. ಜಿಲ್ಲೆಯಲ್ಲಿರುವ ಪ್ರಮುಖ ಕೈಗಾರಿಕೆಗಳನ್ನು ತಿಳಿಸು.
8. ಜಿಲ್ಲೆಯಲ್ಲಿರುವ ಪ್ರಸಿದ್ಧ ಸ್ಥಳಗಳನ್ನು ಹೆಸರಿಸು.
9. ಜಿಲ್ಲೆಯ ಪ್ರಮುಖ ಕಸುಬುಗಳನ್ನು ಹೇಳು?
10. ಜಿಲ್ಲೆಯ ಪ್ರಸಿದ್ಧ ವ್ಯಕ್ತಿಗಳನ್ನು ಹೆಸರಿಸು.

**ಸೂಚನೆ :** ಶಿಕ್ಷಕರು ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಖನಿಜಗಳು, ಸಂಪನ್ಮೂಲಗಳು, ಕರಕುಶಲ ವಸ್ತುಗಳು, ಪ್ರಸಿದ್ಧ ಸ್ಥಳಗಳು, ಪ್ರಸಿದ್ಧ ವ್ಯಕ್ತಿಗಳನ್ನು ಆಧರಿಸಿ ಜಿಲ್ಲೆಯ ಭೌಗೋಳಿಕ ನಕ್ಷೆಯ ಆಧಾರದ ಮೇಲೆ ಚರ್ಚಿಸುವುದು.

## ನಿಮಗಿದು ಗೊತ್ತೆ ?

* ಭಾರತದ ಅತಿ ಎತ್ತರದ ಜಲಪಾತ ಶಿವಮೊಗ್ಗ ಜಿಲ್ಲೆ ಜೋಗ ಎಂಬಲ್ಲಿದೆ.
* ಕೃಷ್ಣರಾಜ ಸಾಗರ ಅಣೆಕಟ್ಟಿನ ನಿರ್ಮಾತ ಸರ್.ಎಂ. ವಿಶ್ವೇಶ್ವರಯ್ಯ ಚಿಕ್ಕಬಳ್ಳಾಪುರ ಜಿಲ್ಲೆಯವರು.
* ರೇಷ್ಮೆ ಬಟ್ಟೆ ತಯಾರಿಕೆಗೆ ಮೈಸೂರು ಪ್ರಸಿದ್ಧವಾಗಿದೆ.
* ಕಾವೇರಿ ನದಿಯ ಉಗಮಸ್ಥಾನ ಕೊಡಗು ಜಿಲ್ಲೆ ತಲಕಾವೇರಿ.
* ವಿಶ್ವವಿಖ್ಯಾತ ಗೋಲ್‌ಗುಂಬಜ್ ಬಿಜಾಪುರದಲ್ಲಿದೆ.
* ಯಕ್ಷಗಾನ ಕರಾವಳಿ ಜಿಲ್ಲೆಗಳ ಪ್ರಸಿದ್ಧ ಕಲೆಯಾಗಿದೆ.
* ಕಾಫಿಗೆ ಹೆಸರುವಾಸಿಯಾದ ಜಿಲ್ಲೆ ಚಿಕ್ಕಮಗಳೂರು.

13



# ಆಶು ಲೇಖನ

193

**ಸೂಚನೆ :** ಮಕ್ಕಳಿಗೆ ಆಶುಲೇಖನ ಪೆಟ್ಟಿಗೆಯಿಂದ ಮಿಂಚುಪಟ್ಟಿಗಳನ್ನು ಆಯ್ದು ತಮಗೆ ಸಿಗುವ ವಿಷಯಗಳ ಬಗ್ಗೆ ನೋಟ್‌ಪುಸ್ತಕದಲ್ಲಿ 2–3 ವಾಕ್ಯಗಳಲ್ಲಿ ಬರೆಯಲು ಸೂಚಿಸುವುದು.

**ವಿಷಯಗಳು**

1. ಬಿಸಿಲು
2. ಮಳೆ
3. ಕಾಮನ ಬಿಲ್ಲು
4. ಬೆಳೆಗಳು
5. ನಮ್ಮ ತಾಲ್ಲೂಕು
6. ನಮ್ಮ ಜಿಲ್ಲೆ

13



# ನೆನಪಿನ ಆಟ

195

| | | | | | | |
|---|---|---|---|---|---|---|
| 33 | 34 | 35 ಬಸ್ಸು, ಕಾರು ಈ ಎರಡರಲ್ಲಿ ನಿನಗೆ ಯಾವುದು ಇಷ್ಟ. ಏಕೆ? | 36 | 37 ಹವಾಮಾನ ಎಂದರೇನು? | 38 | 39 |
| 32 | | | | | | |
| 31 ಮಡಕೆಗಳ ಉಪಯೋಗವೇನು? | 30 | 29 | 28 ನೀನು ಬರೆದ ಅಂಚೆ ಪತ್ರಗಳನ್ನು ಎಲ್ಲಿ ಹಾಕುವೆ? | 27 | 26 ಕಾಮನ ಬಿಲ್ಲು ಯಾವಾಗ ಕಾಣುತ್ತದೆ? | 25 |
| | | | | | | 24 ನಿನ್ನ ಜಿಲ್ಲೆ ಯಾವುದು? |
| 17 | 18 ಆದಿಮಾನವನು ಎಲ್ಲಿ ವಾಸಿಸುತ್ತಿದ್ದನು? | 19 | 20 | 21 ನೀರಿನ ಮೇಲೆ ಚಲಿಸುವ ವಾಹನಗಳಾವುವು? | 22 | 23 |
| 16 | | | | | | |
| 15 ಗೋಳ ಎಂದರೇನು? | 14 | 13 | 12 ಆಗಸದಲ್ಲಿ ಚಲಿಸುವ ವಾಹನಗಳಾವುವು? | 11 | 10 | 9 ಭೂಮಿಯ ವಿಶೇಷ ಆಕಾರ ಯಾವುದು? |
| | | | | | | 8 |
| 1 | 2 | 3 ನೀನು ಪ್ರಯಾಣ ಮಾಡಿರುವ 4 ವಾಹನಗಳ ಹೆಸರು ಬರೆ | 4 | 5 ಈಗ ಧಾನ್ಯಗಳನ್ನು ಯಾವುದರಲ್ಲಿ ಸಂಗ್ರಹಿಸುವರು? | 6 | 7 ಸೂರ್ಯನಿಂದ ನಮಗೆ ಏನೇನು ಸಿಗುತ್ತದೆ? |

13



# ನೆನಪಿನ ಆಟ

195

**ಬೇಕಾಗುವ ವಸ್ತುಗಳು :**
1. ನೆನಪಿನ ಆಟದ ಬೋರ್ಡು
2. ಡೈಸ್
3. ಕಾಯಿಗಳು (ಬೀಜ, ಕಲ್ಲು ಇತ್ಯಾದಿ)

**ಆಟಗಾರರ ಸಂಖ್ಯೆ:** ಕನಿಷ್ಟ –2, ಗರಿಷ್ಟ–4

**ಆಡುವ ಕ್ರಮ :**

* ಪ್ರತಿಯೊಬ್ಬ ಆಟಗಾರನು ತನ್ನ ಸರದಿ ಬಂದಾಗ ಡೈಸ್ ಹಾಕಬೇಕು. ಡೈಸ್‌ನ ಮೇಲ್ಮುಖವಾಗಿ ಬಂದ ಸಂಖ್ಯೆಯಷ್ಟು ಮನೆಗಳನ್ನು ತನ್ನ ಕಾಯಿ ಇರುವ ಮನೆಯಿಂದ ಬೋರ್ಡಿನ ಮೇಲೆ ಮುನ್ನಡೆಸಬೇಕು.
* ಕಾಯನ್ನು ಮುನ್ನಡಿಸುವಾಗ ತಲುಪಿದ ಮನೆಯಲ್ಲಿರುವ ಪ್ರಶ್ನೆಗೆ ಉತ್ತರಿಸಿ, (ಪ್ರಶ್ನೆಯಿದ್ದರೆ), ತನ್ನ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳಬೇಕು. ಪ್ರಶ್ನೆ ಇಲ್ಲದಿರುವ ಮನೆಗೆ ಬಂದಾಗ ಅಲ್ಲಿಯೇ ಉಳಿದು ತನ್ನ ಮುಂದಿನ ಸರದಿಯವರೆಗೆ ಕಾಯುವುದು.
* ಹೀಗೆ ಆಟ ಮುಂದುವರೆದು, ಯಾವ ವಿದ್ಯಾರ್ಥಿ ಕೊನೆ ಮನೆಯನ್ನು ಮೊದಲು ತಲುಪುವವನ್ನು ವಿಜಯಿ ಎಂದು ಘೋಷಿಸುವುದು.

13



# ನನ್ನ ಸಾಧನೆ–2

196

ಸೂಚನೆ : ಪ್ರಶ್ನೆಗಳನ್ನು ನಿನ್ನ ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಉತ್ತರಿಸು.

**I. ಹೊಂದಿಸಿ ಬರೆ.**

| | |
|---|---|
| 1. ಎತ್ತಿನಗಾಡಿ | 1. ದೂರದ ಪ್ರಯಾಣ |
| 2. ಸೂರ್ಯೋದಯ | 2. ಬಿಸಿಲು ಮಳೆ |
| 3. ಕಾಮನಬಿಲ್ಲು | 3. ಕುಂಬಾರ |
| 4. ವಿಮಾನ | 4. ಪಶ್ಚಿಮ |
| 5. ಮಡಕೆ | 5. ಪೂರ್ವ |
| | 6. ಹತ್ತಿರದ ಪ್ರಯಾಣ |

**II. ಖಾಲಿ ಜಾಗವನ್ನು ಸರಿಯಾದ ಪದದಿಂದ ತುಂಬಿ ಬರೆ.**

1. ಮಾತು ಬಾರದವರು ತಮ್ಮ ಅಭಿಪ್ರಾಯಗಳನ್ನು .................. ಮೂಲಕ ವ್ಯಕ್ತಪಡಿಸುವರು.
2. ಸ್ನಾನದ ನಂತರ .................. ಧರಿಸಬೇಕು.
3. ನಿನ್ನ ತಾಲ್ಲೂಕಿನ ಹೆಸರು ..................
4. ಅಂಚೆಪತ್ರಗಳನ್ನು ಆಯಾ ವಿಳಾಸಕ್ಕೆ ತಲುಪಿಸುವವರು ..................
5. ಭೂಮಿಯ ವಿಶೇಷವಾದ ಆಕಾರ ..................

**III. ಗುಂಪಿಗೆ ಸೇರದ ಪದವನ್ನು ಆರಿಸಿ ಬರೆ.**

1. ಅಂಚೆಪತ್ರ, ಟೆಲಿಗ್ರಾಂ. ಕರಪತ್ರ, ಮನಿಯಾರ್ಡರ್.
2. ಬಸ್ಸು, ವಿಮಾನ, ಕಾರು, ಲಾರಿ.
3. ಕಮ್ಮಾರ, ದರ್ಜಿ, ಮಡಕೆ ರೈತ.
4. ಸ್ವೆಟರ್, ರೈನುಕೋಟು, ಛತ್ರಿ ಪ್ಲಾಸ್ಟಿಕ್‌ಚೀಲ.

**IV. ಕೆಳಗಿನ ಹೇಳಿಕೆಗಳನ್ನು ಸರಿಪಡಿಸಿ ಬರೆ.**

1. ಆದಿಮಾನವನು ಉಡುಪಾಗಿ ಬಟ್ಟೆಯನ್ನು ಬಳಸುತ್ತಿದ್ದನು.

   ..........................................................................................

2. ಮಾತು ಬರುವವರು ಸಂಜ್ಞೆಗಳನ್ನು ಬಳಸುವುದಿಲ್ಲ.

   ..........................................................................................

3. ಹಡಗು ನೆಲದ ಮೇಲೆ ಸಂಚರಿಸುವ ವಾಹನ.

   ..........................................................................................

4. ಬಟ್ಟೆಯನ್ನು ನೇಕಾರ ಹೊಲಿಯುತ್ತಾನೆ.

   ..........................................................................................

13



# ನನ್ನ ಸಾಧನೆ–2

196

**V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ಲೋಬ್ ಎಂದರೇನು?

   ..........................................................................................

2. ನಿಲ್ದಾಣಗಳಲ್ಲಿ ಯಾವ ಯಾವ ಕೆಲಸಗಾರರಿರುತ್ತಾರೆ.

   ..........................................................................................

3. ದೂರದರ್ಶನದಲ್ಲಿ ನಿನಗೆ ಇಷ್ಟವಾದ ಕಾರ್ಯಕ್ರಮ ಯಾವುದು?

   ..........................................................................................

4. ಮಡಕೆಗಳನ್ನು ಏತಕ್ಕಾಗಿ ಉಪಯೋಗಿಸುತ್ತಾರೆ?

   ..........................................................................................

5. ನಿಮ್ಮ ಜಿಲ್ಲೆಯ ನೆರೆಹೊರೆ ಜಿಲ್ಲೆಗಳ ಹೆಸರುಗಳನ್ನು ಬರೆ.

   ..........................................................................................

**VI. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸು.**

1. ನಮ್ಮ ಅಗತ್ಯಗಳನ್ನು ಪೂರೈಸುವ, ಕಸುಬುದಾರರನ್ನು ಹೆಸರಿಸು.

   ..........................................................................................

   ..........................................................................................

2. ನಿನ್ನ ಜಿಲ್ಲೆಯ ಪ್ರಮುಖ ಬೆಳೆಗಳು ಯಾವುವು?

   ..........................................................................................

   ..........................................................................................

3. ಅಂಚೆ ಕಛೇರಿಯಲ್ಲಿ ನಡೆಯುವ ಕಾರ್ಯಚಟುವಟಿಕೆಗಳನ್ನು ಬರೆ.

   ..........................................................................................

   ..........................................................................................

4. ಆಟಗಳಿಂದಾಗುವ ಪ್ರಯೋಜನಗಳನ್ನು ಪಟ್ಟಿ ಮಾಡಿ.

   ..........................................................................................

   ..........................................................................................

**VII. ಈ ಹೇಳಿಕೆಗಳಿಗೆ ಕಾರಣ ಬರೆಯಿರಿ.**

1. ದೂರದ ಊರುಗಳಿಗೆ ಪ್ರಯಾಣಿಸಲು ಎತ್ತಿನಗಾಡಿಯನ್ನು ಬಳಸುವುದಿಲ್ಲ.

   ..........................................................................................

   ..........................................................................................

13



# ನನ್ನ ಸಾಧನೆ–2

196

2. ನಾವು ಒಂಟಿ ಜೀವನ ನಡೆಸಲು ಇತರರನ್ನು ಅವಲಂಬಿಸಿದ್ದೇವೆ.

.............................................................................................................................

.............................................................................................................................

**VIII. ಈ ಕೆಳಗೆ ಕೆಲವು ಆಟಗಳ ಹೆಸರುಗಳನ್ನು ನೀಡಲಾಗಿದೆ. ಇವುಗಳನ್ನು ಒಳಾಂಗಣ ಹಾಗೂ ಹೊರಾಂಗಣ ಆಟಗಳಾಗಿ ವರ್ಗೀಕರಿಸಿ, ಕೆಳಗೆ ನೀಡಿರುವ ಪಟ್ಟಿಯಲ್ಲಿ ಬರೆ.**

ಕ್ರಿಕೆಟ್, ಪಗಡೆ, ಪುಟ್ಬಾಲ್, ಚೌಕಾಬಾರ, ವಾಲಿಬಾಲ್, ಲಗೋರಿ, ಹಾವು–ಏಣಿ ಆಟ, ಹುಲಿ–ಹಸು, ಹಳಗುಣಿಮಣೆ, ಕುಂಟೆಬಿಲ್ಲೆ, ಕೇರಂ, ಚಿನ್ನಿದಾಡು, ಚದುರಂಗ, ಕಬಡ್ಡಿ.

| ಒಳಾಂಗಣ ಆಟಗಳು | ಹೊರಾಂಗಣ ಆಟಗಳು |
|---|---|
| | |